**ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,**
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

| ವಾರ್ಷಿಕ ಬಡ್ಡಿ ದರದ ವಿವರಗಳು | ಸಾಮಾನ್ಯರಿಗೆ % | ಹಿರಿಯ ನಾಗರಿಕರಿಗೆ % |
|---|---|---|
| * 1 ವರ್ಷದಿಂದ 3 ವರ್ಷಗಳವರೆಗೆ | 10.5 | 11 |
| * 181ದಿನಗಳಿಂದ 365 ದಿನಗಳವರೆಗೆ | 8 | 8.5 |
| * 91 ದಿನಗಳಿಂದ 180 ದಿನಗಳವರೆಗೆ | 7 | 7.5 |
| * 31 ದಿನಗಳಿಂದ 90 ದಿನಗಳವರೆಗೆ | 6 | 6.5 |
| * 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ | | |

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

# ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ



PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

## ‘ಅರ್ಥವಿಲ್ಲದ ಮಾತಿಗಿಂತ ಅರ್ಥಪೂರ್ಣ ಮೌನವೇ ಉತ್ತಮ’

ಪಾಕಿಸ್ತಾನ ತನ್ನ 2ನೇ ಪಂದ್ಯದಲ್ಲಿ ಐಸಿಸಿ ರ್‍ಯಾಂಕಿಂಗ್‌ನಲ್ಲಿ ಭಾರತಕ್ಕಿಂತ ಉತ್ತಮ ಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಬೀಗಿತ್ತು ಮತ್ತು ರ್‍ಯಾಂಕಿಂಗ್‌ನಲ್ಲಿ ಕೆಳ ಕ್ರಮಾಂಕದಲ್ಲಿರುವ ಶ್ರೀಲಂಕಾ ವಿರುದ್ಧ ಭಾರತ ಸೋಲು ಕಂಡಿತ್ತು. ಈ ಅವಕಾಶವನ್ನು ಬಳಸಿಕೊಂಡಿರುವ ಪಾಕಿಸ್ತಾನ ಮಾಜಿ ಕ್ರಿಕೆಟಿಗ ರಶೀದ್ ಲತೀಫ್, ಸೆಹ್ವಾಗ್ ಅವರಿಗೆ ವಿಶೇಷ ಪ್ರತಿಕ್ರಿಯೆ ಹೆಸರಿನ 15 ನಿಮಿಷಗಳ ವಿಡಿಯೋ ಹರಿಬಿಟ್ಟು ಸೆಹ್ವಾಗ್‌ರ ಕಾಲೆಳೆದಿದ್ದಾರೆ. ಈ ವಿಡಿಯೊ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿರುವ ಸೆಹ್ವಾಗ್, ಅರ್ಥವಿಲ್ಲದ ಮಾತಿಗಿಂತ ಅರ್ಥಪೂರ್ಣ ಮೌನವೇ ಉತ್ತಮ ಎಂದು ಟ್ವೀಟ್ ಮಾಡಿ ಸುಮ್ಮನಾಗಿದ್ದಾರೆ.

## ಸ್ಯಾಂಡಲ್‌ವುಡ್ ನಟಿ ಜೊತೆ ಶಾಸಕ ಇಕ್ಬಾಲ್ ಅನ್ಸಾರಿ 2ನೇ ವಿವಾಹ

ಗಂಗಾವತಿ ಶಾಸಕ ಇಕ್ಬಾಲ್ ಅನ್ಸಾರಿ ಕನ್ನಡದ ನಟಿಯೊಬ್ಬರ ಜೊತೆ 2ನೇ ವಿವಾಹ ಮಾಡಿಕೊಂಡಿರುವುದು ಸಹೋದರರ ನಡುವಿನ ಆಸ್ತಿ ಹಂಚಿಕೆ ವಿವಾದದಿಂದ ಬಹಿರಂಗವಾಗಿದೆ. ಶಾಸಕ ಅನ್ಸಾರಿ ತಮ್ಮ ಸಹೋದರರಿಗೆ ಸೇರಬೇಕಾದ ಆಸ್ತಿಯನ್ನು 2ನೇ ಪತ್ನಿ ಕನ್ನಡ ನಟಿ ಪಂಚಮಿ ಹೆಸರಿಗೆ ಬರೆದಿರುವುದಾಗಿ ಸಹೋದರರು ಆರೋಪಿಸಿದ್ದಾರೆ.

## ಜು.1ರಿಂದ ಜಿಎಸ್‌ಟಿ ಜಾರಿ ಹಿನ್ನೆಲೆ : 66 ಅಗತ್ಯ ವಸ್ತುಗಳ ತೆರಿಗೆ ದರ ಕಡಿತ

ಜುಲೈ 1ರಿಂದ ದೇಶಾದ್ಯಂತ ಏಕರೂಪ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ದರ ಜಾರಿಗೆ ಬರಲಿದ್ದು, ಈ ಹಿನ್ನೆಲೆಯಲ್ಲಿ ನಡೆದ ಕೌನ್ಸಿಲ್ ಸಭೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಕೆಲ ಅಗತ್ಯ 66 ವಸ್ತುಗಳ ತೆರಿಗೆ ದರವನ್ನು ಕಡಿಮೆ ಮಾಡಿದೆ. ಉಪ್ಪಿನಕಾಯಿ ಮತ್ತು ಸಾಸಿವೆ ಸೇರಿದಂತೆ ಕೆಲವು ಅಡುಗೆ ವಸ್ತುಗಳು ಮತ್ತು ಸಿನಿಮಾ ಟಿಕೆಟ್ ದರ ಕಡಿಮೆಯಾಗಲಿದೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :215 ಸೋಮವಾರ ಜೂ.12, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

# ಮುಂಗಾರು ಮಳೆ : ಹರ್ಷಚಿತ್ತರಾದ ರೈತರು

## ☐ ಮಲೆನಾಡು ಭಾಗದಲ್ಲಿ ಬಿರುಸು ಪಡೆದುಕೊಂಡ ಮಳೆ
## ☐ ಹೇಮೆ ಜಲಾಶಯ ವ್ಯಾಪ್ತಿಯಲ್ಲಿಯೂ ಕಳೆದೆರಡು ದಿನದಿಂದ ವರ್ಷಧಾರೆ

ಹಾಸನ : ಮುಂಗಾರು ಜಿಲ್ಲೆ ಪ್ರವೇಶಿಸಿ ಎರಡು ದಿನ ಕಳೆದಿದೆ. ಭಾನುವಾರ ಸಂಜೆ ಮಲೆನಾಡು ಭಾಗದಲ್ಲಿ ಎಡೆಬಿಡದೆ ಮಳೆ ಸುರಿಯಿತು. ಕೊಡಗಿನ ಗಡಿ ಭಾಗ, ಗೊದ್ದು, ಅತ್ತಿಹಳ್ಳಿ, ಹೊಂಗಡಹಳ್ಳ, ಮಾರನಹಳ್ಳಿ ಸುತ್ತಮುತ್ತ ಭಾರೀ ಮಳೆಯಾಗಿದೆ. ಮಾರನಹಳ್ಳಿಯಲ್ಲಿ 4 ಇಂಚಿಗೂ ಅಧಿಕ ಮಳೆಯಾಗಿದೆ.

ಮಲೆನಾಡಿನಲ್ಲಿ ಮಳೆ ಬಿರುಸು ಪಡೆದುಕೊಂಡಿದ್ದು, ಬಯಲು ಸೀಮೆ ಪ್ರದೇಶದಲ್ಲಿಯೂ ಮಳೆಯ ಸಿಂಚನವಾಗುತ್ತಿದೆ. ಅರಸೀಕೆರೆ ತಾಲ್ಲೂಕಿನ ಜಾವಗಲ್, ಕಣಕಟ್ಟೆ ಹೋಬಳಿ ಹೊರತುಪಡಿಸಿ ಉಳಿದಂತೆ ಜಿಲ್ಲಾದ್ಯಂತ ಮಳೆಯಾಗುತ್ತಿದೆ.

ಮಳೆಯಿಂದ ಸಂಭ್ರಮ ಮನೆ ಮಾಡಿದೆ. ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಜನರು ಹರ್ಷಚಿತ್ತರಾಗಿದ್ದಾರೆ. ಕೆರೆ ಕಟ್ಟೆ, ಬಾವಿಗಳಲ್ಲಿ ನೀರು ಸಂಗ್ರಹವಾಗುತ್ತಿದೆ. ಎರಡು ಮೂರು ದಿನಗಳಿಂದ ವಾತಾವರಣ ತಂಪಾಗಿದೆ.

40, 42 ಡಿಗ್ರಿ ಸೆಲ್ಸಿಯಸ್ ತಾಪಮಾನ ನಗರದಲ್ಲಿತ್ತು. ಈಗ ಎರಡೇ ದಿನದಲ್ಲಿ ತಾಪಮಾನ ತಗ್ಗಿದೆ. ಎಲ್ಲೆಡೆ ತಂಪು ವಾತಾವರಣ ಇರುವುದರಿಂದ ಸಹಜವಾಗಿಯೇ ಜನರು ಕೂಡ ಸಂಭ್ರಮಗೊಂಡಿದ್ದಾರೆ.

ಗ್ರಾಮಾಂತರ ಪ್ರದೇಶದಲ್ಲಿ ಹಸಿರು ಕಣ್ಣಿಗೆ ಮುದ ನೀಡುತ್ತಿದೆ. ಅಂತರ್ಜಲ ಕ್ರಮೇಣವಾಗಿ ವೃದ್ಧಿಯಾಗುತ್ತಿದೆ. ಹೇಮಾವತಿ ಜಲಾನಯನ ವ್ಯಾಪ್ತಿಯಲ್ಲಿಯೂ ಮಳೆ ಆಗುತ್ತಿರುವುದು ಸಮಾಧಾನ ತರಿಸಿದೆ.

ಇನ್ನು ಮೂರ್‍ನಾಲ್ಕು ದಿವಸದಲ್ಲಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಏರಿಕೆಯಾಗಲಿದೆ ಎಂದು ಹೇಮಾವತಿ ಜಲಾಶಯ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

- ☐ ಗೊದ್ದು, ಹೆತ್ತೂರು, ಅತ್ತಿಹಳ್ಳಿ, ಮಾಗೇರಿ, ಕೊಡಗಿನ ಗಡಿ ಭಾಗದಲ್ಲಿ ಹೆಚ್ಚು ಮಳೆ
- ☐ ಅರಸೀಕೆರೆ ತಾಲ್ಲೂಕು ಹೊರತುಪಡಿಸಿ ಉಳಿದೆಡೆ ಸಾಮಾನ್ಯ
- ☐ ರೈತರಿಗೆ ಬಿಡುವಿಲ್ಲದ ಕೆಲಸ
- ☐ ಬಿತ್ತನೆ ಪ್ರಮಾಣವೂ ಅಲ್ಲಲ್ಲಿ ಚುರುಕು
- ☐ ಚನ್ನರಾಯಪಟ್ಟಣ, ಅರಕಲಗೂಡು, ಹೊಳೆನರಸೀಪುರದಲ್ಲಿ ಸಾಧಾರಣ

### ವಾಡಿಕೆಗಿಂತಲೂ ಹೆಚ್ಚು ಮಳೆ

ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ ಜನವರಿಯಿಂದ ಮೇ 15 ರವರೆಗೆ ಶೇ.22ಕ್ಕೂ ಹೆಚ್ಚು ಮಳೆಯಾಗಿದೆ. ವಾಡಿಕೆಯಂತೆ 106 ಎಂ.ಎಂ. ಮಳೆ ಆಗಬೇಕಿತ್ತು. ಆದರೆ ಈ ಬಾರಿ 129 ಎಂ.ಎಂ. ಮಳೆಯಾಗಿದೆ.

ತಾಲ್ಲೂಕುವಾರು ಮಳೆ ಬಿದ್ದ ವಿವರ ಇಂತಿದೆ.

| ತಾಲ್ಲೂಕು | ವಾಡಿಕೆ ಮಳೆ (ಎಂ.ಎಂ.ಗಳಲ್ಲಿ) | ಈಗ ಬಿದ್ದಿರುವ ಮಳೆ (ಎಂ.ಎಂ.ಗಳಲ್ಲಿ) |
|---|---|---|
| ಅರಕಲಗೂಡು | 103.3 | 153.3 |
| ಅರಸೀಕೆರೆ | 83 | 82.2 |
| ಬೇಲೂರು | 131.44 | 139.3 |
| ಚ.ರಾ.ಪಟ್ಟಣ | 81.5 | 122.4 |
| ಹಾಸನ | 114.0 | 152.0 |
| ಹೊ.ನ.ಪುರ | 110 | 115.9 |
| ಸಕಲೇಶಪುರ | 127.7 | 144.0 |

☐ ಜಾನುವಾರುಗಳಿಗೆ ಮೇವಿನ ಸಮಸ್ಯೆ ಎದುರಾಗಿತ್ತು. ಈಗ ಸಮಸ್ಯೆ ನಿವಾರಣೆಯಾಗಿದೆ. ಈ ವರ್ಷ ಬರಗಾಲದಲ್ಲಿ ಜಾನುವಾರುಗಳ ಮೂಕ ವೇದನೆ ನೋಡಲಾಗಿರಲಿಲ್ಲ. ಈಗ ಮಳೆ ಸಂತಸ ಮೂಡಿಸಿದೆ ಎಂದು ಚಿಕ್ಕಕೊಂಡಗುಳ ಗ್ರಾಮದ ರೈತ ಕೃಷ್ಣೇಗೌಡ ಹೇಳುತ್ತಾರೆ.

> “ಹೇಮಾವತಿ ಜಲಾನಯನ ವ್ಯಾಪ್ತಿಯಲ್ಲಿ ಮಳೆಯಾಗುತ್ತಿದೆ. ಆದರೆ ಜಲಾಶಯಕ್ಕೆ ದೊಡ್ಡ ಪ್ರಮಾಣದಲ್ಲೇನೂ ನೀರು ಹರಿದು ಬರುತ್ತಿಲ್ಲ. ಇನ್ನು ಮೂರ್‍ನಾಲ್ಕು ದಿವಸ ಇದೇ ಸ್ಥಿತಿ ಇದ್ದರೆ ಜಲಾಶಯದ ಸ್ಥಿತಿ ಸುಧಾರಣೆಯಾಗಲಿದೆ.
>
> -ಜಲಾಶಯ ಅಧಿಕಾರಿಗಳು, ಗೊರೂರು.

> “ಬಿತ್ತನೆ ಎಲ್ಲೆಡೆ ಚುರುಕಾಗಿದೆ. ಅರಸೀಕೆರೆ ಭಾಗದಲ್ಲಿ ಮಾತ್ರ ಮಳೆ ಕಡಿಮೆಯಾಗಿದೆ. ವಾಡಿಕೆಗಿಂತ ಈ ತಿಂಗಳಲ್ಲಿ ಮಳೆ ಜಾಸ್ತಿಯಾಗಿದೆ. ಕೆರೆ ಕಟ್ಟೆಗಳಿಗೆ ಇನ್ನೂ ಅಗತ್ಯ ನೀರು ಬೇಕು. ಇನ್ನೂ ಬಿರುಸಿನ ಮಳೆಯಾಗಬೇಕು.
>
> -ಬೋರೇಗೌಡ, ಮೊಸಳೆಹೊಸಹಳ್ಳಿ

> “ಏಕದಳ ಧಾನ್ಯ ಬಹುತೇಕ ಬಿತ್ತನೆಯಾಗಿದೆ. ಹೆಸರು, ಉದ್ದು, ಅಲಸಂದೆ ಬೆಳೆ ಚೆನ್ನಾಗಿದೆ. ಈಗಾಗಲೇ ಪ್ರವಾಸ ಕೈಗೊಂಡು ಪರೀಕ್ಷೆ ನಡೆಸಲಾಗಿದೆ. ಜಿಲ್ಲಾದ್ಯಂತ ಬಿತ್ತನೆ ಕಾರ್ಯ ಚುರುಕಾಗಿದೆ. ಈ ಬಾರಿ ಹೆಚ್ಚು ಮಳೆ ನಿರೀಕ್ಷಿಸಲಾಗಿದೆ.
>
> -ರಾಮಚಂದ್ರು, ಜಂಟಿ ಕೃಷಿ ನಿರ್ದೇಶಕ

> ಈಗ ಮಳೆ ಬೇಕು. ಆಲೂಗೆಡ್ಡೆ ಬಿತ್ತನೆ ಮಾಡಿದ್ದೇವೆ. ಗೊಬ್ಬರ ಕೊಡಲಾಗಿದೆ. ವಾತಾವರಣ ಕೂಡ ತಂಪಾಗಿದೆ. ಇನ್ನು ಮೂರ್‍ನಾಲ್ಕು ದಿವಸ ಮಳೆ ಅಗತ್ಯ ಇದೆ. ಮಳೆ ಕೈಕೊಟ್ಟರಂತೂ ಕೆಟ್ಟ ಸ್ಥಿತಿ ನಿರ್ಮಾಣವಾಗುತ್ತದೆ.
>
> -ಕುಮಾರ, ಕೃಷಿಕ, ಉದ್ದೂರು.

## ಟ್ಯಾಂಕರ್ ಲಾರಿ ಡಿಕ್ಕಿ : ಸ್ಥಳದಲ್ಲೇ ಸಾವನ್ನಪ್ಪಿದ ಬೈಕ್ ಸವಾರ

ಆಲೂರು : ಇಲ್ಲಿಗೆ ಸಮೀಪದ ಭರತವಳ್ಳಿ ಕ್ರಾಸ್ ಬಳಿ ಭಾನುವಾರ ಬೆಳಿಗ್ಗೆ ಬೈಕ್‌ಗೆ ಟ್ಯಾಂಕರ್ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ದುರ್ಘಟನೆ ನಡೆದಿದೆ.

ಭೈರಾಪುರದ ಈಶ್ವರಾಚಾರ್ ಎಂಬುವವರ ಮಗ ಪುರುಷೋತ್ತಮ (32) ಎಂಬಾತನೇ ಸ್ಥಳದಲ್ಲೇ ಸಾವನ್ನಪ್ಪಿರುವ ಸವಾರ. ಹಾಸನ ನಗರಸಭೆಯಲ್ಲಿ ‘ಡಿ’ ಗ್ರೂಪ್‌ನಡಿ ಕೆಲಸ ನಿರ್ವಹಿಸುತ್ತಿದ್ದ ಪುರುಷೋತ್ತಮ, ಬೆಳಿಗ್ಗೆ ಕೆಲಸಕ್ಕೆಂದು ಬೈಕ್‌ನಲ್ಲಿ ಹಾಸನದ ಕಡೆಗೆ ಬರುತ್ತಿದ್ದಾಗ ಟ್ಯಾಂಕರ್ ಲಾರಿಯೊಂದು ಭರತವಳ್ಳಿ ಕ್ರಾಸ್‌ನಲ್ಲಿ ಬೆಳಿಗ್ಗೆ 6.30ರಲ್ಲಿ ಡಿಕ್ಕಿ ಹೊಡೆದಿದೆ.

ಬೈಕ್‌ನಿಂದ ಬಿದ್ದ ಸವಾರ ಟ್ಯಾಂಕರ್‌ನ ಹಿಂಬದಿಯ ಚಕ್ರಕ್ಕೆ ಸಿಕ್ಕಿ ಹಾಕಿಕೊಂಡ ಪರಿಣಾಮ ಸಾವನ್ನಪ್ಪಿದ. ಸುದ್ದಿ ತಿಳಿದ ಆಲೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಬಗ್ಗೆ ಠಾಣೆಯಲ್ಲಿ ದೂರು ದಾಖಲಾಗಿದೆ.



ಇನ್ನು ಮುಂಗಾರು ಶುರು. ಮಳೆಯಲ್ಲಿಯೂ ಬದುಕು ಕಟ್ಟಿಕೊಳ್ಳಬೇಕಲ್ಲವೇ? ನಗರದಲ್ಲಿ ಕಾರ್ಮಿಕ ಕುಟುಂಬವೊಂದು ಮಳೆಯ ನಡುವೆಯೇ ತಮ್ಮ ಸೂರಿಗಾಗಿ ಟೆಂಟ್ ನಿರ್ಮಾಣ ಕಾರ್ಯದಲ್ಲಿ ತೊಡಗಿರುವುದು.

## ‘ಅಂಚೆ ನೌಕರರ ನ್ಯಾಯಯುತ ಬೇಡಿಕೆ ಈಡೇರಿಕೆಗೆ ಸ್ಪಂದಿಸಿ’

ಹಾಸನ : ನಗರದಿಂದ ಗ್ರಾಮಗಳಿಗೆ ತೆರಳುವ ಅಂಚೆ ನೌಕರರ ಬಗ್ಗೆ ಅಧಿಕಾರಿಗಳು ಗಮನ ನೀಡಬೇಕು. ನಿವೇಶನ ಒದಗಿಸುವಂತೆ ಹಾಗೂ ಮಕ್ಕಳಿಗೆ ಶಿಕ್ಷಣ ಕಲ್ಪಿಸುವ ಬಗ್ಗೆ ನೌಕರರು ಅಧಿಕಾರಿಗಳಿಗೆ ತಿಳಿಸಿದಾಗ, ಅಧಿಕಾರಿಗಳು ಇದನ್ನು ಕೇಂದ್ರ ಸರ್ಕಾರಕ್ಕೆ ಮುಟ್ಟಿಸುವ ಕೆಲಸ ಮಾಡಬೇಕು ಎಂದು ಶಾಸಕ ಹೆಚ್.ಎಸ್.ಪ್ರಕಾಶ್ ಸಲಹೆ ನೀಡಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಅಖಿಲ ಭಾರತ ಅಂಚೆ ನೌಕರರ ಸಂಘಗಳ ಒಕ್ಕೂಟ ಹಾಗೂ ಜಿಡಿಎಸ್ (ಎನ್.ಎಫ್.ಪಿ.ಇ.) ಇವರ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಜಂಟಿ ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಪ್ರಾಮಾಣಿಕ ಕೆಲಸ ಮಾಡುತ್ತಿದ್ದಾರೆ ಎಂದರೆ ಅದು ಅಂಚೆ ನೌಕರರು ಮಾತ್ರ. ಆದರೆ ಇವರು ಯಾವುದೇ ಮೂಲಭೂತ ಸೌಕರ್ಯವಿಲ್ಲದೆ ಜೀವನ ಸಾಗಿಸುತ್ತಿದ್ದಾರೆ. ಯಾವುದೇ ಭದ್ರತೆ ಇಲ್ಲದೆ ಹೀನಾಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಅಂಚೆ ನೌಕರರ ಬೇಡಿಕೆಯನ್ನು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ಸಲ್ಲಿಸಿದರೆ ಅವರು ಮುಂದೆ ನಡೆಯಲಿರುವ ಲೋಕಸಭಾ ಅಧಿವೇಶನದಲ್ಲಿ ಧ್ವನಿ ಎತ್ತುವ ಮೂಲಕ ಸಮಸ್ಯೆ ಬಗೆಹರಿಸಲಿದ್ದಾರೆ ಎಂದರು.

ಸರಕಾರದ ಯೋಜನೆಯನ್ನು ಅಂಚೆ ನೌಕರರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಹಾಸನ ವಿಭಾಗದ ಅಂಚೆ ಅಧೀಕ್ಷಕ ಹೆಚ್.ಸಿ.ಸದಾನಂದ ಮಾತನಾಡಿ, ಸಂಘಟನೆ ಎಂಬುದು ಇರಬೇಕು. ಇದಕ್ಕೊಂದು ಉದ್ದೇಶವೂ ಇರಬೇಕು. ಸಂಘಟನೆಯಿಂದ ನಮ್ಮ ಹಕ್ಕುಗಳನ್ನು ಪಡೆಯಬಹುದು ಎಂದು ಹೇಳಿದರು.

ಉತ್ತಮ ಸೇವಾ ಗುಣವನ್ನು ನೌಕರರು ಮೈಗೂಡಿಸಿಕೊಳ್ಳಬೇಕು. ಅಂಚೆ ಇಲಾಖೆ ಇಲ್ಲಿಯವರೆಗೂ ಉತ್ತಮ ಸೇವೆ ನೀಡುತ್ತಿದ್ದು, ಮುಂದೆಯೂ ಕೂಡ ನೀಡಲಿದೆ ಎಂದರು.

ವಲಯ ಕಾರ್ಯದರ್ಶಿ ಪುರುಷೋತ್ತಮ್ ಮಾತನಾಡಿ, ಇಂದು ನಾವು ತಂತಿ ವಿಭಾಗ ಕಳೆದುಕೊಂಡಿದ್ದೇವೆ. ಆದರೆ ಇದುವರೆಗೂ ಖಾಸಗಿ ಆಗದಿರುವ ಇಲಾಖೆ ಎಂದರೆ ಅದು ಅಂಚೆ ಇಲಾಖೆ. ಕಮಲೇಶ್ ಚಂದ್ರ ವರದಿಯನ್ನು ಅನುಷ್ಠಾನಕ್ಕೆ ತರುವಲ್ಲಿ ಕೇಂದ್ರ ಸರಕಾರ ವಿಳಂಬ ನೀತಿ ಅನುಸರಿಸುತ್ತಿದೆ. ಇದನ್ನು ವಿರೋಧಿಸಿ ಜುಲೈ 27ರಂದು ನವದೆಹಲಿಯಲ್ಲಿರುವ ದೂರಸಂಪರ್ಕ ಖಾತೆ ಸಚಿವರ ಸಂಚಾರ ಭವನದ ಮುಂದೆ ಸಹಸ್ರಾರು ಸಂಖ್ಯೆಯಲ್ಲಿ ಗ್ರಾಮೀಣ ಅಂಚೆ ನೌಕರರು ಬೃಹತ್ ಪ್ರತಿಭಟನೆ ನಡೆಸಲಿದ್ದಾರೆ ಎಂದರು.

ಆಗಸ್ಟ್ 6,7 ಮತ್ತು 8ರಂದು ಅಖಿಲ ಭಾರತ ಅಂಚೆ ನೌಕರರ ಸಂಘದಿಂದ ಬೆಂಗಳೂರಿನ ಫ್ರೀಡಂ ಉದ್ಯಾನವನದಲ್ಲಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. *(-4ನೇ ಪುಟಕ್ಕೆ)*

## ತುಂತುರು ಮಳೆ ನಡುವೆಯೇ ಚಿಣ್ಣರ ಕುಂಚದಲ್ಲಿ ಅರಳಿದ ಚಿತ್ತಾರ

ಹಾಸನ: ಬೆಳಿಗ್ಗೆಯಿಂದಲೇ ತುಂತುರು ಮಳೆ. ನೂರಾರು ಪುಟಾಣಿ ಮಕ್ಕಳು ಕೈಯಲ್ಲಿ ಬಿಳಿ ಹಾಳೆ ಹಿಡಿದು ಬಣ್ಣದ ಡಬ್ಬಿ ಹಿಡಿದು ಚಳಿಯಲ್ಲಿ ಬೆಚ್ಚಗೆ ಕುಳಿತಿದ್ದರು.

ನಗರದ ಮಹಾರಾಜ ಪಾರ್ಕ್ ಆವರಣದಲ್ಲಿ ನಗರಸಭೆ ಮತ್ತು ಚಿತ್ಕಲಾ ಫೌಂಡೇಷನ್ ವತಿಯಿಂದ ಸ್ವಚ್ಛ ಭಾರತ ಯೋಜನೆ ಹಾಗೂ ವಿಶ್ವ ಪರಿಸರ ದಿನದ ಅಂಗವಾಗಿ ಪರಿಸರ ಜಾಗೃತಿ ಮೂಡಿಸಲು ಭಾನುವಾರ ಹಮ್ಮಿಕೊಂಡಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಕಂಡುಬಂದ ದೃಶ್ಯವಿದು. ಪರಿಸರ, ಘನತ್ಯಾಜ್ಯ ಸೇರಿದಂತೆ ವಿವಿಧ ವಿಷಯ ಕುರಿತು ಚಿತ್ರ ಬಿಡಿಸುವ ಮೂಲಕ ಮಕ್ಕಳು ಪ್ರತಿಭೆ ಅನಾವರಣ ಮಾಡಿದರು.

ವೇದಿಕೆ ಕಾರ್ಯಕ್ರಮ ಉದ್ಘಾಟನೆಗೊಂಡು ಸ್ಪರ್ಧೆ ಆರಂಭಗೊಳ್ಳಬೇಕು ಎನ್ನುವಷ್ಟರಲ್ಲಿ ತುಂತುರು ಮಳೆ ಶುರುವಾಯಿತು. ಮಕ್ಕಳಿಗೆ ನಿರಾಸೆ ಆಗಬಾರದೆಂಬ ಕಾರಣಕ್ಕೆ ಹಾಸನಾಂಬ ಕಲಾಕ್ಷೇತ್ರ ಹಾಗೂ ಹಳೇ ಬಸ್ ನಿಲ್ದಾಣ ಮುಂಭಾಗದ ಫುಟ್‌ಪಾತ್ ಮೇಲೆ ಮಕ್ಕಳಿಗೆ ಚಿತ್ರ ಬಿಡಿಸಲು ಅನುವು ಮಾಡಿಕೊಡಲಾಯಿತು. ಮಳೆಯನ್ನು ಆಸ್ವಾದಿಸುತ್ತಲೇ ಮಕ್ಕಳು ಮರ, ಗಿಡ, ಪಕ್ಷಿಗಳ ಚಿತ್ರ ರಚಿಸಿದರು.

ಪರಿಸರ ನಾಶ, ವನ್ಯಜೀವಿಗಳು, ಘನ ತ್ಯಾಜ್ಯ ವಿಲೇವಾರಿ ಕುರಿತು ಚಿಣ್ಣರು ಚಿತ್ರ ಬಿಡಿಸಿದರು. ಚಿತ್ಕಲಾ ಫೌಂಡೇಷನ್ ಶಾಲೆ ಮಕ್ಕಳು ರಚಿಸಿದ ಚಿತ್ರಗಳು ಆಕರ್ಷಕವಾಗಿದ್ದವು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮಕ್ಕಳಿಗೆ ನಗರಸಭೆ ವತಿಯಿಂದ ಪ್ರಮಾಣ ಪತ್ರ ವಿತರಿಸಲಾಯಿತು. ಸುಮಾರು ಮೂರು ತಾಸು ನಡೆದ ಸ್ಪರ್ಧೆಯಲ್ಲಿ ನಗರದ ವಿವಿಧ ಶಾಲೆಯ 600ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು.

ಇದಕ್ಕೂ ಮುನ್ನ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ನಗರಸಭೆ ಅಧ್ಯಕ್ಷ ಎಚ್.ಎಸ್.ಅನಿಲ್ ಕುಮಾರ್, ಪರಿಸರ ಸಂರಕ್ಷಣೆ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕಾಗಿದೆ. ಪ್ರಸ್ತುತ ಪರಿಸರ ನಾಶ ಹೆಚ್ಚಾಗಿದ್ದು, ಭವಿಷ್ಯದಲ್ಲಿ ಮಕ್ಕಳಿಗೆ ಉಸಿರಾಡಲು ಗಾಳಿ ಇಲ್ಲದೆ ಕೃತಕ ಗಾಳಿ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಗರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಎಂದು ನುಡಿದರು.

ಚಿತ್ರಕಲಾ ಶಿಕ್ಷಕ ದೇಸಾಯಿ ಮಾತನಾಡಿ, ಮಕ್ಕಳಿಗೆ ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಬೇಕಾದ ಅಗತ್ಯತೆ ಇದೆ. ಮಕ್ಕಳಿಗೆ ಕೇವಲ ವಿದ್ಯಾಭ್ಯಾಸ ನೀಡುವುದೇ ಪೋಷಕರ

- ☐ ಪರಿಸರ, ಘನತ್ಯಾಜ್ಯ ಸೇರಿದಂತೆ ವಿವಿಧ ವಿಷಯ ಕುರಿತು ಚಿತ್ರ
- ☐ ಮಹಾರಾಜ ಪಾರ್ಕ್‌ನಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಿದ ಮಕ್ಕಳು
- ☐ ಹಳೇ ಬಸ್ ನಿಲ್ದಾಣ, ಹಾಸನಾಂಬ ಕಲಾಕ್ಷೇತ್ರದ ಮುಂಭಾಗ ಅವಕಾಶ
- ☐ 3 ತಾಸು ನಡೆದ ಸ್ಪರ್ಧೆ
- ☐ 600ಕ್ಕೂ ಹೆಚ್ಚು ಮಕ್ಕಳು ಭಾಗಿ

ಗುರಿಯಾಗಬಾರದು. ಪಠ್ಯದೊಂದಿಗೆ ಚಿತ್ರಕಲಾ ಚಟುವಟಿಕೆಗಳಲ್ಲೂ ಭಾಗವಹಿಸಿ ಅವರಿಗೆ ಸಾಮಾಜಿಕ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ನಗರಸಭೆ ಉಪಾಧ್ಯಕ್ಷೆ ಲೀಲಾವತಿ ವಾಸು ಹಾಗೂ ಸದಸ್ಯರು ಈ ವೇಳೆ ಹಾಜರಿದ್ದರು.

## ರಾಮನಾಥಪುರ : ಬಿತ್ತನೆ ಕಾರ್ಯ ಬಹುತೇಕ ಪೂರ್ಣ

ರಾಮನಾಥಪುರ : ಹೋಬಳಿ ವ್ಯಾಪ್ತಿಯಲ್ಲಿ ಶನಿವಾರದಿಂದ ಮುಂಗಾರು ಮಳೆ ಕಾಲಿಟ್ಟಿದ್ದು, ಪ್ರಮುಖ ಬೆಳೆಗಳಾದ ತಂಬಾಕು, ಆಲೂ, ಮುಸುಕಿನ ಜೋಳದ ಬಿತ್ತನೆ ಕಾರ್ಯ ಚುರುಕುಗೊಂಡಿದೆ. ಶೇ.80ರಷ್ಟು ಜಮೀನಿನಲ್ಲಿ ಬಿತ್ತನೆ ಕಾರ್ಯ ಪೂರ್ಣಗೊಂಡಿದೆ. ಇದರಿಂದ ರೈತರಲ್ಲಿ ಸಂತಸ ಮೂಡಿಸಿದೆ.

ಕೆಲವು ದಿವಸಗಳಿಂದ ಮೋಡ ಕವಿದ ವಾತಾವರಣದ ನಡುವೆ ಆಗಾಗ ಬಿಸಿಲು ಕಾಣಿಸಿಕೊಂಡು ಮಳೆ ಸುರಿಯದೆ ನಿರಾಸೆ ಮೂಡಿಸುತ್ತಿತ್ತು. ಶನಿವಾರ ಬೆಳಿಗ್ಗೆಯಿಂದಲೇ ಕೊಡಗು ಭಾಗದಿಂದ ದಟ್ಟವಾದ ಕಪ್ಪು ಮೋಡಗಳು ಆವರಿಸಿಕೊಂಡು ತುಂತುರು ಮಳೆ ಬೀಳಲಾರಂಭಿಸಿತು. ಜಿಟಿ ಜಿಟಿ ಮಳೆ ಈ ಭಾಗದ ಜನತೆ ಕೃಷಿ ಚಟುವಟಿಕೆಯಲ್ಲಿ ಉತ್ಸಾಹದಿಂದ ತೊಡಗುವಂತೆ ಮಾಡಿದೆ.



ಕೆಲವು ದಿವಸಗಳಿಂದ ಮಾಯವಾಗಿದ್ದ ಮುಂಗಾರು ಈ ಬಾರಿ ಉತ್ತಮವಾಗಿ ಸುರಿಯುತ್ತಿರುವುದು ರೈತರಿಗೆ ವರದಾನವಾಗಿದೆ. ಬಿತ್ತನೆ ಮಾಡಿದ್ದ ರಾಗಿ, ಆಲೂಗೆಡ್ಡೆ, ಮುಸುಕಿನ ಜೋಳ ಮುಂತಾದ ದ್ವಿದಳ ಧಾನ್ಯಗಳು ಹಾಗೂ ಬೆಳವಣಿಗೆಯ ಹಂತದಲ್ಲಿರುವ ತಂಬಾಕು ಗಿಡಗಳಿಗೆ ಉಪಯುಕ್ತವಾಗಿರುವ ಮುಂಗಾರು ಪ್ರವೇಶಿಸಿರುವುದರಿಂದ ರೈತರು ಹರ್ಷ ವ್ಯಕ್ತಪಡಿಸಿದ್ದಾರೆ.

ಕಳೆದ ಬಾರಿ ಆಲೂಗೆಡ್ಡೆಗೆ ಸೂಕ್ತ ವಾತಾವರಣ ಇರದಿದ್ದ ಕಾರಣ ಮಳೆ ಆಗುವುದಿಲ್ಲ ಎಂಬ ನಿಲುವಿನಿಂದ ರೈತರು ಶೇ.50ರಷ್ಟು ಪ್ರದೇಶದಲ್ಲಿ ಬಿತ್ತನೆ ಮಾಡಿರಲಿಲ್ಲ. ಆದರೆ ಈ ಬಾರಿ ಕೆಲವು ಕಡೆಗಳಲ್ಲಿ ಉತ್ತಮ ಮಳೆಯಾದ ಪರಿಣಾಮ ರೈತರು ಈ ಬಾರಿ ಹೆಚ್ಚು ಪ್ರದೇಶದಲ್ಲಿ ಆಲೂ ಬೆಳೆ ಬಿತ್ತನೆಗೆ ಮುಂದಾಗಿದ್ದಾರೆ.

*(-4ನೇ ಪುಟಕ್ಕೆ)*

## ಚಾಂಪಿಯನ್ಸ್ ಟ್ರೋಫಿ: ದಕ್ಷಿಣ ಆಫ್ರಿಕಾ ಮಣಿಸಿ ಸೆಮಿಫೈನಲ್‌ಗೆ ಎಂಟ್ರಿ ಕೊಟ್ಟ ಭಾರತ

**ಲಂಡನ್** : ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯ ಭಾರತ-ಆಫ್ರಿಕಾ ನಡುವಿನ ನಿರ್ಣಾಯಕ ಪಂದ್ಯದಲ್ಲಿ ಟೀಂ ಇಂಡಿಯಾ ದಕ್ಷಿಣ ಆಫ್ರಿಕಾ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿ ಸೆಮಿಫೈನಲ್ ಪ್ರವೇಶಿಸಿದೆ.

ಲಂಡನ್‌ನ ದಿ ಓವಲ್ ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟೀಂ ಇಂಡಿಯಾ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇದರೊಂದಿಗೆ ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ 44.3 ಓವರ್‌ಗಳಲ್ಲಿ 191 ರನ್‌ಗಳಿಗೆ ಸರ್ವಪತನ ಕಂಡಿತು. ದಕ್ಷಿಣ ಆಫ್ರಿಕಾ ನೀಡಿದ 192 ರನ್‌ಗಳ ಸಾಧಾರಣ ಮೊತ್ತ ಬೆನ್ನಟ್ಟಿದ ಟೀಂ ಇಂಡಿಯಾ 38 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 193 ರನ್‌ಗಳನ್ನು ಸಿಡಿಸುವ ಮೂಲಕ ಗೆಲುವಿನ ನಗೆ ಬೀರಿತು.

ದಕ್ಷಿಣ ಆಫ್ರಿಕಾ ತಂಡದ ಆರಂಭಿಕರಾದ ಡಿ ಕಾಕ್ 53, ಹಾಶೀಂ ಆಮ್ಲಾ 35, ಡುಪ್ಲೆಸಿಸ್ 36, ಎಬಿಡಿ ವಿಲಿಯರ್ಸ್ 16, ಜೆಪಿ ಡುಮಿನಿ 20 ರನ್ ಗಳಿಸಿದರು. ಟೀಂ ಇಂಡಿಯಾ ಪರ ಭುವನೇಶ್ವರ್ ಕುಮಾರ್ 2 ವಿಕೆಟ್, ಅಶ್ವಿನ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ ತಲಾ 1 ವಿಕೆಟ್ ಪಡೆದರು.

ಭಾರತದ ಪರ ರೋಹಿತ್ ಶರ್ಮಾ 12, ಶಿಖರ್ ಧವನ್ 78, ವಿರಾಟ್ ಕೊಹ್ಲಿ ಅಜೇಯ 76 ರನ್ ಮತ್ತು ಯುವರಾಜ್ ಸಿಂಗ್ ಅಜೇಯ 23 ರನ್ ಗಳಿಸಿದರು.

## ಕೆರೆ, ಗುಂಡು ತೋಪು ಒತ್ತುವರಿ ತೆರವಿಗೆ ಕ್ರಮ

ಚನ್ನರಾಯಪಟ್ಟಣ : ತಾಲ್ಲೂಕಿನಲ್ಲಿ ಒತ್ತುವರಿಯಾಗಿರುವ ಕೆರೆ, ಕಟ್ಟೆ, ಕಲ್ಯಾಣಿ, ಗುಂಡು ತೋಪಿನಂತಹ ಸರ್ಕಾರಿ ಜಾಗಗಳ ಒತ್ತುವರಿಯನ್ನು ಹಂತ ಹಂತವಾಗಿ ಸರ್ವೆ ಮಾಡಿಸಿ ತೆರುವುಗೊಳಿಸಲಾಗುತ್ತದೆ ಎಂದು ಹಾಸನ ಉಪವಿಭಾಗಾಧಿಕಾರಿ ಎಚ್.ಎಲ್. ನಾಗರಾಜ್ ತಿಳಿಸಿದರು.

ಅವರು ಪಟ್ಟಣದ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಹಸಿರು ಭೂಮಿ ಪ್ರತಿಷ್ಠಾನ ಹಾಗೂ ಭೂಮಿ ಉಳಿಸಿ ಆಂದೋಲನ ಭಾನುವಾರ ಏರ್ಪಡಿಸಿದ್ದ ಜಲ ಸಂವರ್ಧನೆಗಾಗಿ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಾ, ಹಿಂದಿನ ಕಾಲದ ಜನ ಬುದ್ಧಿವಂತರಾಗಿದ್ದು, ಅವಶ್ಯಕತೆಗೆ ತಕ್ಕಂತೆ ಕೆರೆ, ಕಟ್ಟೆ, ಕಲ್ಯಾಣಿ, ಗುಂಡು ತೋಪುಗಳನ್ನು ನಿರ್ಮಿಸಿದ್ದಾರೆ. ಇಂದು ಹೊಸದಾಗಿ ಒಂದು ಕೆರೆಯನ್ನು ನಿರ್ಮಿಸಲು ಆಗುತ್ತಿಲ್ಲ. ತಾಲ್ಲೂಕು ಹಿಂದೆಂದೂ ಕಂಡರಿಯದಂತಹ ಬರಗಾಲವನ್ನು ಈ ವರ್ಷ ಎದುರಿಸಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸರ್ಕಾರಿ ಆಸ್ತಿ ಒತ್ತುವರಿಯನ್ನು ಅಧಿಕಾರಿಗಳು ತೆರವುಗೊಳಿಸಬೇಕು. ಇಲ್ಲದಿದ್ದಲ್ಲಿ ಕಾಯ್ದೆ 192/2ಎ ಪ್ರಕಾರ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದರ ಜೊತೆಗೆ ಒತ್ತುವರಿದಾರರ ಮೇಲೂ ದೂರು ದಾಖಲಿಸಲಾಗುತ್ತದೆ ಎಂದರು.

ಮುಂದಿನ ದಿನಗಳಲ್ಲಿ ಜಲ ಸಂರಕ್ಷಣೆಯೇ ಸರ್ಕಾರದ ಮೂಲ ಉದ್ದೇಶವಾಗಿದ್ದು, ಬಜೆಟ್‌ನಲ್ಲಿ ಇದಕ್ಕಾಗಿಯೇ ಹಣ ಮೀಸಲಿಡಬೇಕಾಗುತ್ತದೆ. ಹಾಸನ ಜಿಲ್ಲೆಯೊಂದರಲ್ಲಿಯೇ ಈ ವರ್ಷ 2 ಸಾವಿರಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಅದರಲ್ಲಿ ಶೇ.40ರಷ್ಟು ಕೊಳವೆ ಬಾವಿಗಳು ವಿಫಲವಾಗಿವೆ. ಇದೇ ರೀತಿ ಬರಗಾಲ ಮುಂದುವರಿದರೆ ಉಳಿದ ಕೊಳವೆ ಬಾವಿಗಳೂ ಬತ್ತುತ್ತವೆ. ಆದ್ದರಿಂದ ಜನರ ಸಹಕಾರದಿಂದ ಕೆರೆ, ಕಟ್ಟೆ, ಕಲ್ಯಾಣಿಗಳ ಹೂಳೆತ್ತುವ ಕೆಲಸವಾಗುತ್ತಿದ್ದು, ಗ್ರಾಮಗಳಲ್ಲಿಯೇ ಜಲಸೇನೆಗಳನ್ನು ಕಟ್ಟಬೇಕು. ಈ ವಿಷಯವಾಗಿ ಎಲ್ಲಾ ತಹಸೀಲ್ದಾರರಿಗೂ ಸೂಚನೆ ನೀಡಲಾಗಿದೆ. ಒಂದು ತಾಲ್ಲೂಕಿನಲ್ಲಿ 50ಕ್ಕಿಂತ ಹೆಚ್ಚು ಜನ ಸಂಪನ್ಮೂಲ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು ಎಂದು ಹೇಳಿದರು.

ಸರ್ಕಾರದಿಂದ ಹಲವಾರು ಕಾರ್ಯಕ್ರಮಗಳಿದ್ದು, ಅವುಗಳನ್ನು ಕ್ರಮಬದ್ಧವಾಗಿ ಅನುಷ್ಠಾನಕ್ಕೆ ತರಬೇಕು. ಸರ್ಕಾರದ ಯಾವುದೇ ಸವಲತ್ತುಗಳು ಅರ್ಹ ಫಲಾನುಭವಿಗಳಿಗೆ ತಲುಪಲು ಶಿಫಾರಸ್ಸು ಪತ್ರ ಬೇಕಾಗಿಲ್ಲ. ಸವಲತ್ತು ತಲುಪಿಸಲು ಅಧಿಕಾರಿಗಳು ಮೀನಾಮೇಷ ಎಣಿಸಿದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಗೊರೂರು ನಾಲಾ ವ್ಯಾಪ್ತಿಗೆ ಬರುವಂತಹ ಎಲ್ಲಾ ಕೆರೆ ಕಟ್ಟೆಗಳನ್ನು ತುಂಬಿಸಲು ಶ್ರಮಿಸಲಾಗುತ್ತದೆ ಎಂದರು.

ರೈತ ಸಂಘದ ಮುಖಂಡ ಅರಳಾಪುರ ಮಂಜೇಗೌಡ ಮಾತನಾಡಿ, ಸರ್ಕಾರ ರೈತರಿಗೆ ಸಬ್ಸಿಡಿ ನೀಡುವುದರ ಬದಲು ರೈತರು ಬೆಳೆದ ಬೆಳೆಗೆ ಸೂಕ್ತ ವೈಜ್ಞಾನಿಕ ಬೆಲೆ ನೀಡುವಂತೆ ವಿನಂತಿ ಮಾಡಿದರು.

*(-4ನೇ ಪುಟಕ್ಕೆ)*

## ಕಲ್ಯಾಣಿ ಪುನಶ್ಚೇತನಕ್ಕೆ ಶ್ರಮದಾನ

### ಹೊಳೆನರಸೀಪುರ ತಾಲ್ಲೂಕು ಕಿನ್ನರಹಳ್ಳಿ ಗ್ರಾಮದಲ್ಲಿ

ಹೊಳೆನರಸೀಪುರ : ಹಸಿರು ಭೂಮಿ ಪ್ರತಿಷ್ಠಾನವು ತಾಲ್ಲೂಕಿನ ಹಳೇಕೋಟೆ ಹೋಬಳಿಯ ಕಿನ್ನರಹಳ್ಳಿಯಲ್ಲಿ ಶ್ರಮದಾನದ ಮೂಲಕ ಕಲ್ಯಾಣಿ ಪುನಶ್ಚೇತನಗೊಳಿಸಿತು.

ಭಾನುವಾರ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೂ ಹಸಿರು ಭೂಮಿ ಪ್ರತಿಷ್ಠಾನದ ಗೌರವಾಧ್ಯಕ್ಷ ಹಾಗೂ ಉಪವಿಭಾಗಾಧಿಕಾರಿ ಡಾ.ಎ.ಸಿ. ನಾಗರಾಜ್ ನೇತೃತ್ವದಲ್ಲಿ ಹೊಳೆನರಸೀಪುರ ತಾಲ್ಲೂಕಿನ ಕಂದಾಯ ಇಲಾಖೆ ಅಧಿಕಾರಿಗಳು, ಗ್ರಾಮ ಲೆಕ್ಕಿಗರು, ಹಸಿರು ಭೂಮಿ ಪ್ರತಿಷ್ಠಾನದ ಬಳಗದವರು ಹಾಗೂ ಗ್ರಾಮಸ್ಥರ ನೆರವಿನಿಂದ ಕಲ್ಯಾಣಿಯನ್ನು ಪುನಶ್ಚೇತನಗೊಳಿಸಲಾಯಿತು.

ಈ ಕಲ್ಯಾಣಿಯಲ್ಲಿ ಹೂಳು ತೆಗೆದು ಸ್ವಚ್ಛಗೊಳಿಸಲಾಯಿತು. ಮುಂದಿನ ಭಾನುವಾರ ಕೂಡ ಶ್ರಮದಾನ ಮುಂದುವರೆಯಲಿದೆ. ಕಲ್ಯಾಣಿಯ ಸುತ್ತ ಸೌಂದರ್ಯೀಕರಣ ಕೆಲಸಕ್ಕೂ ಹಸಿರು ಭೂಮಿ ಪ್ರತಿಷ್ಠಾನ ಒತ್ತು ನೀಡಲಿದೆ.

> “ಕಿನ್ನರಹಳ್ಳಿ ಗ್ರಾಮದಲ್ಲಿನ ಕಲ್ಯಾಣಿ ಪುನಶ್ಚೇತನದ ಮುಂದುವರಿದ ಶ್ರಮದಾನ ಮುಂದಿನ ಭಾನುವಾರವೂ ಮುಂದುವರೆಯಲಿದೆ. ಗ್ರಾಮಸ್ಥರು ಇದಕ್ಕೆ ಸಹಕಾರ ನೀಡಿದ್ದಾರೆ.
>
> *-ಡಾ.ಹೆಚ್.ಎಲ್.ನಾಗರಾಜ್, ಗೌರವಾಧ್ಯಕ್ಷ, ಹಸಿರು ಭೂಮಿ ಪ್ರತಿಷ್ಠಾನ.*

ಶ್ರಮದಾನದಲ್ಲಿ ಹಸಿರು ಭೂಮಿ ಪ್ರತಿಷ್ಠಾನದ ರಾಜೀವೇಗೌಡ, ಶಿವಕುಮಾರ್, ರಾಣಿ, ತಿಮ್ಮೇಶ್ ಪ್ರಭು, ಸ್ಕೌಟ್ ಅಂಡ್ ಗೈಡ್ಸ್‌ನ ಕಾಂಚನಾಮಾಲಾ ಇನ್ನಿತರರು ಇದ್ದರು.